ಹುಡುಗರೇ ಅನೇಕ ಬಂಡುಪದಗಳನ್ನು ತುಂಡು ತುಂಡಾಗಿ ಕಲಿತು ಇವನ ಎದುರಿಗೇ ಹಾಡುತ್ತಿದ್ದರು. ಆಗೆಲ್ಲ ಇವನಿಗೆ ಅಪಮಾನವಾದಂತೆನಿಸಿ ಏನು ಮಾಡಲೂ ತೋಚದೆ ಅವ್ವನ ಹತ್ತಿರ ಹೇಳಿಕೊಂಡು ಅತ್ತಿದ್ದ. ಹನುಮಂತಣ್ಣನಿಗೆ ಇಂತಹ ಸಂಗತಿಗಳಲ್ಲಿ ಬೇಜಾರಾಗುವುದು ಏನಿದೆ ಎನ್ನಿಸುತ್ತಿತ್ತೇ ಹೊರತು ಬಂಡುಪದಗಳು ಬೇಡ ಎಂದು ಎಂದೂ ಅನ್ನಿಸಿರಲಿಲ್ಲ.

★★★

ಅಮ್ಮನ ಹಬ್ಬಕ್ಕೆ ಸಾರಿಕೊಂಡು ಬಂದ ಆಸಾದಿಗೆ ಈ ಸಲದ ಅಮ್ಮನ ಹಬ್ಬ, ಜಾತ್ರೆ ಬಲು ವಿಶೇಷ ಎಂಬುದು ಗೊತ್ತಿತ್ತೇ ಹೊರತು ಯಾವ ರೀತಿ ವಿಶೇಷ ಎಂಬುದರ ಅರಿವಿರಲಿಲ್ಲ. ಈ ಸಲದ ಜಾತ್ರೆಯಲ್ಲಿ ಹಾಡಲು ಇನ್ನೂ ಚೆನ್ನಾದ ಬಂಡುಪದಗಳನ್ನು ನೆನಪಿನಾಳದಿಂದ ಬಗೆದು ತೆಗೆಯಲಾರಂಭಿಸಿದ. ಅಪ್ಪ ಕಣುಮಣ್ಣ ಹಾಡುತ್ತಿದ್ದ ಬಂಡುಹಾಡುಗಳು ಈಗ ಅದೆಷ್ಟೋ ಮರೆತುಹೋಗಿದ್ದವು. ಆಗಾಗ್ಗೆ ಹಾಡುತ್ತಿದ್ದರೆ ನೆನಪಿನಲ್ಲಿ ಉಳಿಯುತ್ತಿದ್ದವು. ಆದರೆ ಅವುಗಳನ್ನು ಹಾಡುವ ಸಂದರ್ಭಗಳೇ ಕಡಿಮೆಯಾಗಿ ಅವೆಲ್ಲ ಮರೆವಿನಲ್ಲಿ ಮುಚ್ಚಿ ಹೋಗಿದ್ದವು. ಈ ಸಲ ಜಾತ್ರೇಲಿ ಅವುನ್ನೆಲ್ಲ ಮತ್ತೆ ಉಜ್ಜಿ ಬೆಳಗಿ ಬಳಸಬೇಕೆಂದು ಅವುಗಳಿಗೆ ಗೆಷ್ಟಿಯ ಬಲೆ ಬೀಸಹತ್ತಿದ.

ಅಪ್ಪ ಕಣುಮಣ್ಣನಿಗೆ ತನ್ನ ಮಗನನ್ನು ಈ ಸುತ್ತಿನಲ್ಲೆ ಬಲು ಅಪರೂಪದ ಆಸಾದಿಯನ್ನಾಗಿ ಮಾಡಬೇಕೆಂಬ ಆಸೆ ಇತ್ತು. ಅವನಿಗಾಗಿ ತಾನೇ ಪರಮಾಸಿ ಕೋಣವೊಂದರ ಚರ್ಮ ತಲಾಷು ಮಾಡಿ ತಂದು ಕೈಯಾರೆ ಹದಮಾಡಿ ಹಲಗೆ ಕಟ್ಟಿಸಿದ್ದ. ಸೂಡಿ ತೋರಿಸಿ ತುಸುವೇ ಬಿಸಿಮಾಡಿದರೆ ಸಾಕು ಕಣಿ ಕಣಿ ಎನ್ನುತ್ತಿತ್ತು. ಚಿಗುರು ಮೀಸೆಯ ಎತ್ತರದ ಆಳು ಹನುಮಂತ. ಅವನು ಅಮ್ಮನ ಎದುರಿಗೆ ನೇರವಾಗಿ ನಿಂತು ಅವಳನ್ನೆ ನೋಡುತ್ತ ಪದ ಹಾಡುತ್ತಿದ್ದರೆ ಗುಡಿಗೆ ಬರುತ್ತಿದ್ದ ಹೆಣ್ಣುಮಕ್ಕಳೆಲ್ಲ ಇವನನ್ನು ಕದ್ದೂ ಕದ್ದೂ ನೋಡುತ್ತಿದ್ದುದನ್ನು ಗಮನಿಸಿದ್ದ. ಆಗಾಗ್ಗೆ ಇಬ್ಬರೂ ಜೋಡಿಯಾಗಿ ನಿಂತು ಅಮ್ಮನ ಎದುರಿಗೆ ಹಲಗೆ ಬಾರಿಸಿ ಪದಗಳನ್ನು ಹೇಳುತ್ತಿದ್ದುದೂ ಉಂಟು. ಆದರೆ ಬಂಡುಪದಗಳನ್ನು ಎತ್ತಿಕೊಂಡಾಗ ಮಗ ಹಿಂಜರಿಯುತ್ತಿದ್ದುದನ್ನು ಗಮನಿಸಿದ್ದ. ಕೆಲವು ಪದಗಳನ್ನು ಮತ್ತೆ ಮತ್ತೆ ಹಾಡಿದಾಗಲೂ ಮಗಾ ಇಡಿಯಾಗಿ ಹಾಡದೆ ಕೆಲವು ಪದಗಳನ್ನು ಗೊಣಗಿಬಿಡುತ್ತಿದ್ದ. ಅದರಲ್ಲೂ ತಾನು ಮೆಚ್ಚಿ ಹಾಡುತ್ತಿದ್ದ ಪದಗಳನ್ನು ಹೀಗೆ ಗೊಣಗುವುದು ಅವನಿಗೆ ಇಷ್ಟವಾಗುತ್ತಿರಲಿಲ್ಲ. ಒಂದುಸಲವಂತೂ

ಅತ್ತೋದ್ರೆ ಮೂರು ತಿಂಗಳು ಇತ್ತೋದ್ರೆ ಆರು ತಿಂಗಳು ಹುತ್ತದ ಕೋವೆಯಂಗೆ ನಿನ
ಹುತ್ತದ ಕೋವೆಯಂಗೆ ನಿನ / ಚಿಕ್ಕಮ್ಮ ನೋಡಿದ್ರೆ ನಗುತಾಳಮ್ಮ
ಕೂಡುವಾಗ ಏನಂತು ಬೆಳಗಿನ ಜಾವ ಬಾರನನ
ಬೆಳಗಿನ ಜಾವ ಬಾರ ನನ / ಅಮ್ಮಯ್ಯ ನಿನಗೆ ಮೂರು ತಿಂಗಳು ಆಯ್ತಮ್ಮ

ಇವೇ ಪದಗಳನ್ನು ಎರಡೆರಡು ಸಲ ಹಾಡಿದರೂ ಯಾವ ಜಾಗದಲ್ಲಿ ಮೈ ಜುಮ್ಮೆನಿಸಿ ನುಡಿಯಬೇಕೋ ಅಲ್ಲೇ ಮುದುಡಿಕೊಂಡುಬಿಡುತ್ತಿದ್ದ. ಅದಕ್ಕೋ ಏನೋ ಒಂದ್ಸಲ ಅಂತರಗಟ್ಟಮ್ಮನ ಪರಿಸೆಗೆ ಹೋಗಿ ಬಾರೋ ಮಗಾ ಎಂದು ಅಂತರಗಟ್ಟಮ್ಮನ ಜಾತ್ರಿಗೆ ಕಳಿಸಿದ್ದ. ಹೊರಟು ನಿಂತಾಗ ಹಲಗೆ ತಗಂಡೋಗು ಮಗಾ, ಅಂತರಗಟ್ಟೆ ಮಾರಿ ಅಂದ್ರೆ ನಮಗೆ ನೆಂಟರಿದ್ದಂಗೆ. ನೆಂಟರ ಮನಿಗೆ ಬರಿಗೈಲಿ ಹೋಗಬಾರದು ಅಂತಾ ನೆಂಟನೂ ಗೆಳೆಯನೂ ಆಗಿದ್ದ ಚೆನ್ನಣ್ಣನ ಜೊತೆಗೆ ಹಲಗೆ ನುಡಿಸಲು ಕಳಿಸಿದ್ದ. ಚೆನ್ನಣ್ಣ ಬಂಡುಪದಗಳ ಕಣಜ. ಕಣದ ನಡುವಿನ ಮೇಟಿಯಂಗೆ ತೆಳ್ಳಗೆ ಇದ್ದ ಚೆನ್ನಣ್ಣ ಅಮ್ಮನ ಅಂಗಳದ ನಡುವೆ ನಿಂತು ಬಂಡುಪದ ತೆಗೆದಾ ಅಂದ್ರೆ ಗುಡಿಯ ಸುತ್ತ ಪರಿಸೆಯೇ